

بسم اللهِ الرَّحمٰنِ الرَّحيم

# ಪಾಕಿಸ್ಥಾನದಲ್ಲಿ ಸಂಭವಿಸಿದ ದೌರ್ಜನ್ಯ ನಿಶ್ಚಯವಾಗಿಯೂ ನಮಗೆ ಬಹಳ ನೋವನ್ನುಂಟುಮಾಡಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **19-12-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದಿನ ಕಾಲದಲ್ಲಿ ನಾವು ಕಾಣುವುದೇನೆಂದರೆ, ದೌರ್ಜನ್ಯಗಳು ಮತ್ತು ಬರ್ಬರ ಕೃತ್ಯಗಳು ಮುಸ್ಲಿಮರದೆಂದು ಹೇಳಿಕೊಳ್ಳುವ ದೇಶಗಳಲ್ಲಿ ಎಷ್ಟು ಹೆಚ್ಚಾಗಿ ಸಂಭವಿಸುತ್ತಿವೆಯೋ ಅಂತಹ ಘಟನೆಗಳು ಮುಸ್ಲಿಮೇತರ ದೇಶಗಳಲ್ಲಿ ಬಾಹ್ಯವಾಗಿ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಂಭವಿಸುವುದಿಲ್ಲ. ಇಂತಹ ಯಾವುದಾದರೂ ಘಟನೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಥವಾ ಮುಸ್ಲಿಮೇತರ ದೇಶಗಳಲ್ಲಿ ಸಂಭವಿಸಿದರೆ ಅದರ ವಿರುದ್ಧ ಬಹಳ ತೀವ್ರವಾಗಿ ಪ್ರತಿಭಟನೆ ಸೂಚಿಸಲ್ಪಡುತ್ತಿದೆ. ಇಸ್ಲಾಮ್ ಪ್ರೀತಿ ಮತ್ತು ಸಾಹೋದರ್ಯದ ಬಗ್ಗೆ ಎಷ್ಟು ಆಗ್ರಹ ಪೂರ್ಣವಾಗಿ ಉಪದೇಶಿಸುತ್ತಿದೆಯೋ ಅದಕ್ಕೆ ತದ್ವಿರುದ್ಧವಾಗಿ ಮುಸ್ಲಿಮ್ ಸರಕಾರಗಳು ಮತ್ತು ಇಸ್ಲಾಮಿನ ಹೆಸರಲ್ಲಿ ರಚಿಸಲಾದ ಗುಂಪುಗಳು ಅಷ್ಟೇ ತೀವ್ರವಾಗಿ ದೌರ್ಜನ್ಯಗಳನ್ನು ನಡೆಸುತ್ತಿವೆ. ಅವರೆಲ್ಲರೂ ಇಸ್ಲಾಮಿನ ಉಪದೇಶಗಳಿಗೆ ಸಂಪೂರ್ಣ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಇಂದಿನ ಕಾಲದಲ್ಲಿ ಇಸ್ಲಾಮಿನ ಹೆಸರಿನಲ್ಲೂ ಶರೀಅತ್ ಜಾರಿಗೊಳಿಸುವ ಬಗ್ಗೆಯೂ ಅಸಂಖ್ಯಾತ ಭೀಕರ ಸಂಘಟನೆಗಳು ಸ್ಥಾಪಿಸಲ್ಪಟ್ಟಿವೆ. ಇಂತಹ ಗುಂಪುಗಳು ಎಂತಹ ಭಯಾನಕ ಕೃತ್ಯಗಳನ್ನು ಮಾಡುತ್ತಾರೆಂದರೆ, ನಾವು ಗಾಬರಿಗೊಂಡು ಹೀಗೆ ಯೋಚಿಸುತ್ತೇವೆ: ಈ ಕೃತ್ಯಗಳನ್ನು ಮಾಡುವವರು ಮನುಷ್ಯರೋ ಅಥವಾ ಮನುಷ್ಯ ರೂಪ ಧರಿಸಿದ ಕ್ರೂರ ಮೃಗಗಳಿಗಿಂತಲೂ ಕೆಟ್ಟದಾದ ಬೇರೆ ಜೀವಿಗಳೋ ಎಂದು. ಇತ್ತೀಚೆಗೆ ಪಾಕಿಸ್ಥಾನದಲ್ಲಿ ನಡೆದ ಭೀಕರ ಕೃತ್ಯ ದೌರ್ಜನ್ಯ ಮಾತ್ರವಲ್ಲ ಕ್ರೂರತೆ ಮತ್ತು ರಕ್ತ ಪಿಪಾಸುತನದ ಅತ್ಯಂತ ಕೆಟ್ಟ ಉದಾಹರಣೆಯೂ ಆಗಿದೆ. ಈ ದೌರ್ಜನ್ಯದ ವಿರುದ್ಧ ಮಾನವೀಯತೆಯೇ ಚೀರುತ್ತಾ ಬೊಬ್ಬೆ ಹಾಕಿತು. ಇಂತಹ ರಕ್ತ ಹರಿಸುವ ಹೋಳಿ ಆಟವನ್ನು ಇಂದಿನಿಂದ ನಾಲ್ಕುವರೆ ವರ್ಷಗಳ ಹಿಂದೆ ಲಾಹೋರಿನಲ್ಲಿ ನಮ್ಮ ಮಸ್‌ಜಿದ್‌ಗಳಲ್ಲೂ ಸಹ ಆಡಲಾಗಿತ್ತು. ಇಲ್ಲಿನ ಒಂದು ಟಿ.ವಿ. ಚ್ಯಾನಲ್– ಪ್ರಾಯಶಃ ಬಿ.ಬಿ.ಸಿ– ಪಾಕಿಸ್ಥಾನದಲ್ಲಿ ಘಟಿಸಿದ ಐದು ಅತ್ಯಂತ ಕ್ರೂರ ಸಂಭವಗಳನ್ನು ವಿವರಿಸಿತ್ತು. ಅವುಗಳಲ್ಲಿ ಲಾಹೋರಿನಲ್ಲಿ ನಮ್ಮ ಮಸ್‌ಜಿದ್‌ಗಳಲ್ಲಿ ಸಂಭವಿಸಿದುದನ್ನು ಪ್ರಸ್ತಾಪಿಸಲಾಯಿತ್ತು. ನಮಗೆ ಸಂಭವಿಸಿದ ಆ ದುಃಖದ ಬಗ್ಗೆ ಮತ್ತು ನಮ್ಮ ವಿರುದ್ಧ ಮಾಡಲಾದ ದೌರ್ಜನ್ಯದ ಬಗ್ಗೆ ಸರಕಾರ ಗಮನಾರ್ಹವೆಂದು ಗಣಿಸಲಿಲ್ಲ. ಅದೇ ರೀತಿ ಜನಸಾಮಾನ್ಯರಲ್ಲಿ ಬಹುತೇಕ ಜನರು ಪ್ರಾಯಶಃ ಮೌಲವಿಗಳಿಗೆ ಭಯಪಟ್ಟು ಆ ಘಟನೆಗಳನ್ನು ಗಮನಾರ್ಹವೆಂದು ಗಣಿಸಲಿಲ್ಲ. ಆದರೆ ಅಹ್ಮದಿಯರಾದ ನಾವು ಅನ್ಯರ ಬಗ್ಗೆ ಸಹಾನುಭೂತಿ ಹೊಂದಿದವರಾಗಿದ್ದೇವೆ. ನಮ್ಮ ಹೃದಯ ನೋವು ಮತ್ತು ದಯೆಯಿಂದ ತುಂಬಿರುತ್ತದೆ. ಇತ್ತೀಚೆಗೆ ಪಾಕಿಸ್ಥಾನದಲ್ಲಿ ಸಂಭವಿಸಿದ ದೌರ್ಜನ್ಯದ ಕಾರಣದಿಂದ ನಾವು ಚಿಂತಿತರಾಗಿದ್ದೇವೆ.

ಪಾಕಿಸ್ಥಾನದಲ್ಲಿ ಸಂಭವಿಸಿದ ಘಟನೆಯಲ್ಲಿ ಮೃಗೀಯತೆಯೂ ಅತ್ಯಂತ ಕ್ರೂರವಾಗಿ ಪ್ರಕಟವಾಯಿತು. ಏಕೆಂದರೆ ದೌರ್ಜನ್ಯಕ್ಕೆ ಗುರಿಯಾದವರಲ್ಲಿ ಬಹುತೇಕ ಮಂದಿ ನಿಷ್ಕಳಂಕ ಮಕ್ಕಳಾಗಿದ್ದರು. ಅವರಿಗೆ ಬಹುಶಃ ಭೀಕರವಾದ ಮತ್ತು ಭೀಕರೇತರ ವಾದದ ಬಗ್ಗೆ ಏನೂ ತಿಳಿದಿರಲಿಕ್ಕಿಲ್ಲ. ಮುಸ್ಲಿಮ್ ಮತ್ತು ಮುಸ್ಲಿಮೇತರರ ಮಧ್ಯೆ ಇರುವ ವ್ಯತ್ಯಾಸವೇನೆಂದು ಸಹ ಅವರಿಗೆ ತಿಳಿದಿರಲಿಕ್ಕಿಲ್ಲ. ಆದರೆ ಅವರನ್ನು ಬಹಳ ದೌರ್ಜನ್ಯಕರವಾಗಿ ಕೊಲ್ಲಲಾಯಿತು. ಅಲ್ಲಾಹನು ಅವರೆಲ್ಲರನ್ನೂ ತನ್ನ ಕ್ಷಮೆ ಮತ್ತು ಕಾರುಣ್ಯದ ಚಾದರಿನಲ್ಲಿ ಸುತ್ತುವವನಾಗಲಿ. ಅವರ ತಂದೆ ತಾಯಂದಿರಿಗೆ ಸಹನೆ ಮತ್ತು ಧೈರ್ಯ ನೀಡುವವನಾಗಲಿ. ಈ ಮಕ್ಕಳನ್ನು ಭೀಕರರು ಕೊಂದುದು ಏಕೆಂದರೆ ಶರೀಅತನ್ನು ಜಾರಿಗೊಳಿಸುವುದಾಗಿ ಹೇಳಿಕೊಳ್ಳುವ ಗುಂಪುಗಳು ಸೈನ್ಯಕ್ಕೆ ಪ್ರತೀಕಾರ ಮಾಡಲಿಕ್ಕಾಗಿತ್ತು. ಆದರೆ ಆ ಭೀಕರವಾದಿಗಳ ಇಸ್ಲಾಮ್ ಮತ್ತು ಶರೀಅತ್ ಯಾವುದು? ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧ ಮಾಡುವಾಗ ಕೂಡ ಮುಸ್ಲಿಮೇತರ ಮಕ್ಕಳ ಮತ್ತು ಮಹಿಳೆಯರ ವಿರುದ್ಧ ಖಡ್ಗ ಎತ್ತುವುದನ್ನು ತೀವ್ರವಾಗಿ ನಿಷಿದ್ಧಗೊಳಿಸಿದ್ದರು. ಒಬ್ಬ ಯಹೂದಿ ಬಾಲಕನನ್ನು ಕೊಂದ ತನ್ನ ಶಿಷ್ಯನನ್ನು ಪ್ರಶ್ನಿಸಿದಾಗ ಆ ಶಿಷ್ಯ ಹೇಳಿದರು: ಆ ಹುಡುಗ ಯಹೂದಿಯ ಮಗನಾಗಿದ್ದನು. ಅವನನ್ನು ತಪ್ಪಾಗಿ ಕೊಂದರೆ ಸಹ ಅದರಲ್ಲೇನಿದೆ? ಆಗ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಏನು ಅವನು ಮನುಷ್ಯನೊಬ್ಬನ ಮುಗ್ಧ ಮಗುವಾಗಿರಲಿಲ್ಲವೇ? ಮಾನವೀಯತೆಯ ಪರಿಶುದ್ಧಿಯನ್ನು ಕಾಪಾಡಲು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದರ್ಶ ಮಾದರಿ ಈ ರೀತಿ ಇತ್ತು. ಆದರೆ ಇಸ್ಲಾಮಿನ ಹೆಸರಿನಲ್ಲಿ ದೌರ್ಜನ್ಯ ಮಾಡುವವರ ವರ್ತನೆ ಸಾಮಾನ್ಯವಾಗಿ ಮೇಲೆ ವಿವರಿಸಿದಂತಿರುತ್ತದೆ. ಈ ನಿರ್ದಯ ಕೃತ್ಯದ ಬಗ್ಗೆ ಪ್ರತಿಯೊಬ್ಬ ಮನುಷ್ಯನು ದುಃಖವನ್ನು ಪ್ರಕಟಿಸಿದನು. ಮುಸ್ಲಿಮರು ಮಾತ್ರವಲ್ಲ ಮುಸ್ಲಿಮೇತರರು ಸಹ ದುಃಖ ಪ್ರಕಟಿಸಿದರು. ಆದರೆ ಮುಸ್ಲಿಮರೆಂದು ಹೇಳಿಕೊಳ್ಳುವ ಒಂದಲ್ಲ ನಾಲ್ಕು ಸಂಘಟನೆಗಳು ಒಗ್ಗೂಡಿ ಈ ದೌರ್ಜನ್ಯ ಮಾಡಿದ್ದರು. ಅವರು ಹೇಳಿದ್ದರು: ನಮಗೆ ಈ ಘಟನೆ ಬಗ್ಗೆ

ನಾಚಿಕೆ ಇಲ್ಲ ಎಂದು. ನನಗೆ ಅನೇಕ ಪತ್ರಗಳು ಬಂದಿವೆ– ಈ ಘಟನೆಯ ಕಾರಣ ದಿನವಿಡೀ ತಾವು ನೋವಿನಿಂದಲೂ ಚಿಂತೆಯಿಂದಲೂ ಬಳಲಿದೆವು ಎಂದು. ಇದು ವಾಸ್ತವಿಕ ಹೇಳಿಕೆಯೇ ಆಗಿದೆ. ನನ್ನ ಸ್ವಂತ ಸ್ಥಿತಿ ಹೇಗಿತ್ತೆಂದರೆ, ಇಡೀ ದಿನ ನಾನು ಆ ಘಟನೆಯ ಪ್ರಭಾವಕ್ಕೆ ಗುರಿಯಾಗಿದ್ದೆ. ಇಂತಹ ಸ್ಥಿತಿಯಲ್ಲಿ ದೌರ್ಜನ್ಯಗಾರರ ವಿರುದ್ಧ ಅವರು ನಾಶವಾಗಲಿ ಎಂಬ ಪ್ರಾರ್ಥನೆಗಳು ಹೊರಡುತ್ತವೆ. ಅಲ್ಲಾಹನು ಇಂತಹ ದೌರ್ಜನ್ಯಗಾರರಿಂದಲೂ ದುರದೃಷ್ಟಶಾಲಿಗಳಿಂದಲೂ ಬೇಗನೆ ದೇಶವನ್ನು ಮುಕ್ತವನ್ನಾಗಿ ಮಾಡಿ ಪರಿಶುದ್ಧಿಗೊಳಿಸಲಿ. ಎಲ್ಲ ಮುಸ್ಲಿಮ್ ದೇಶಗಳನ್ನೂ ಇಂತಹ ಜನರಿಂದ ಮುಕ್ತ ಮಾಡಿ ಪರಿಶುದ್ಧಗೊಳಿಸಲಿ.

ಈ ಘಟನೆಗಳನ್ನು ನೋಡಿ ಅಹ್ಮದಿಯರ ವಿರುದ್ಧ ಮಾಡಲಾದ ದೌರ್ಜನ್ಯಗಳ ಗಾಯಗಳು ತಾಜಾ ಆಗುತ್ತವೆ. ಆದರೆ ಈ ನಿಷ್ಕಳಂಕ ಮಕ್ಕಳ ಬಗ್ಗೆ ಸಹ ತೀವ್ರ ನೋವು ಉಂಟಾಗುತ್ತದೆ. ಯಾವ ಮಕ್ಕಳ ತಂದೆ ತಾಯಂದಿರನ್ನು ದೌರ್ಜನ್ಯಗಾರರು ಕಿತ್ತುಕೊಂಡರೋ ಆ ಮಕ್ಕಳಿಗೆ ಸಹ ಅಲ್ಲಾಹನು ಸಹನೆಯನ್ನೂ ಧೈರ್ಯವನ್ನೂ ದಯಪಾಲಿಸಲಿ ಮತ್ತು ಅವರ ರಕ್ಷಕನಾಗಲಿ. ಈ ಭೀಕರ ಕೃತ್ಯಗಳು ಮತ್ತು ದೌರ್ಜನ್ಯದ ಘಟನೆಗಳು ಮುಸ್ಲಿಮರೆಂದು ಹೇಳಿಕೊಳ್ಳುವ ಎಲ್ಲ ದೇಶಗಳ ದುಃಖವಾಗಿದೆ. ಪಾಕಿಸ್ಥಾನದಲ್ಲಿ ಮಾತ್ರವಲ್ಲ ಇರಾಖ್, ಸಿರಿಯಾ, ಲೆಬನಾನ್ ಮೊದಲಾದ ದೇಶಗಳಲ್ಲೂ ದೌರ್ಜನ್ಯ ನಡೆಯುತ್ತಿದೆ. ಆದರೆ ಎಲ್ಲದಕ್ಕಿಂತಲೂ ದೊಡ್ಡದಾದ ದೌರ್ಜನ್ಯವೇನೆಂದರೆ, ಈ ಎಲ್ಲ ದೌರ್ಜನ್ಯಗಳು ಅಲ್ಲಾಹನ ಹೆಸರಿನಲ್ಲೂ ಅವನ ಸಂದೇಶವಾಹಕರ ಹೆಸರಿನಲ್ಲೂ ನಡೆಸಲ್ಪಡುತ್ತಿವೆ. ಸಿರಿಯಾದಲ್ಲಿ ಆರು ಸಾವಿರದ ಆರುನೂರು ಮಕ್ಕಳು ಸಮೇತ ದೇಶದ ನಾಗರಿಕರಲ್ಲಿ ಮೂರನೆಯ ಒಂದು ಭಾಗ ಕೊಲ್ಲಲ್ಪಟ್ಟರು. ಐಸಿಸ್ (ISIS) ಮೂಲಕ ಸಾವಿರ ಗಟ್ಟಲೆ ಜನರು ಕೊಲ್ಲಲ್ಪಟ್ಟರು. ನೂರು ಗಟ್ಟಲೆ ಮಹಿಳೆಯರನ್ನೂ ಹೆಣ್ಣು ಮಕ್ಕಳನ್ನೂ ಸಾಲಾಗಿ ನಿಲ್ಲಿಸಿ ಗುಂಡು ಹೊಡೆದು ಕೊಲ್ಲಲಾಯಿತು. ಏಕೆಂದರೆ ಅವರು ಭೀಕರರನ್ನು ವಿವಾಹವಾಗಲು ನಿರಾಕರಿಸಿದ್ದರು.

ಇವುಗಳನ್ನೆಲ್ಲಾ ನೋಡುವಾಗ ಇಸ್ಲಾಮಿನ ವಾಸ್ತವ ರೂಪವನ್ನು ಮನವರಿಕೆ ಮಾಡಿಕೊಂಡ ಮನುಷ್ಯನ ತಲೆ ತಿರುಗುತ್ತದೆ. ಈ ಭೀಕರರು ಯಾವ ಇಸ್ಲಾಮ್ ಧರ್ಮ ತತ್ವಗಳ ಹೆಸರಿನಲ್ಲಿ ಕೆಲಸ ಮಾಡುತ್ತಾರೆಂದು ಚಿಂತಿತನಾಗುತ್ತಾನೆ. **ರಹ್ಮಾನ್** – ಪರಮ ಕರುಣಾಮಯನೂ **ರಊಫ್** – ವಾತ್ಸಲ್ಯಮಯನೂ **ರಹೀಮ್** – ಪದೇ ಪದೇ ದಯೆದೋರುವವನೂ ಆಗಿರುವ ದೇವನು ಎಷ್ಟು ಸಹಾನುಭೂತಿ ಹೊಂದಿದವನಾಗಿದ್ದಾನೆಂದರೆ ಅದರ ಕಲ್ಪನೆ ಸಹ ಮಾಡಲಾಗದು. ಇಂತಹ ದೇವನ ಹೆಸರಲ್ಲಿ ದೌರ್ಜನ್ಯ ಮಾಡುತ್ತಿದ್ದಾರೆ. ಅಲ್ಲಾಹನು رَحْمَةً لِلْعَالَمِينَ **ರಹ್ಮತುನ್ ಲಿಲ್ಆಲಮೀನ್** ಸಕಲ ಲೋಕಗಳಿಗೂ ಅನುಗ್ರಹದಾತನೆಂದು ಯಾವ ಸಂದೇಶವಾಹಕರನ್ನು ಕರೆದಿರುವನೋ ಅವರ ಹೆಸರಲ್ಲಿ ದೌರ್ಜನ್ಯ ಮಾಡುತ್ತಿದ್ದಾರೆ. ಯಾವ ಶರೀಅತ್‌ನಲ್ಲಿ ಅಲ್ಲಾಹನು ಶತ್ರುಗಳೊಂದಿಗೆ ಕೂಡ ನ್ಯಾಯಪೂರ್ಣವಾಗಿ ವರ್ತಿಸಬೇಕೇಂದು ಆಜ್ಞಾಪಿಸಿರುವನೋ ಆ ಶರೀಅತ್ ಹೆಸರಲ್ಲಿ ದೌರ್ಜನ್ಯ ಮಾಡಲಾಗುತ್ತಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

يَا أَيُّهَا الَّذِينَ آمَنُوا كُونُوا قَوَّامِينَ لِلَّهِ شُهَدَاءَ بِالْقِسْطِ وَلاَ يَجْرِمَنَّكُمْ شَنَآنُ قَوْمٍ عَلَى أَلاَّ تَعْدِلُوا اعْدِلُوا هُوَ أَقْرَبُ لِلتَّقْوَى وَاتَّقُوا اللَّهَ إِنَّ اللَّهَ خَبِيرٌ بِمَا تَعْمَلُونَ

**ಯಾ ಅಯ್ಯುಹಲ್ಲಧೀನ ಆಮನೂ ಕೂನೂ ಖವ್ವಾಮೀನ ಲಿಲ್ಲಾಹಿ ಶುಹದಾಅ ಬಿಲ್ ಖಿಸ್ತಿ ವಲಾ ಯಜ್‌ರಿ ಮನ್ನಕುಮ್ ಶನಆನು ಖೌಮಿನ್ ಅಲಾ ಅಲ್ಲಾ ತಅದಿಲೂ ಇಅ್‌ದಿಲೂ ಹುವ ಅಖ್‌ರಬು ಲಿತ್ತಖ್ವಾ ವತ್ತಖುಲ್ಲಾಹ ಇನ್ನಲ್ಲಾಹ ಖಬೀರುನ್ ಬಿಮಾ ತಅ್‌ಮಲೂನ್.**

"ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (ಪವಿತ್ರ ಖುರ್‌ಆನ್ 5: 9)

ಈ ವಚನದಲ್ಲಿ ಅಲ್ಲಾಹನು ನ್ಯಾಯಪಾಲನೆಯ ಮಟ್ಟವನ್ನು ಸತ್ಯವಿಶ್ವಾಸಿಗೆ ಎತ್ತರದಲ್ಲಿರಿಸಿದ್ದಾನೆ. ಹೀಗಿಲ್ಲವಾದರೆ ಸತ್ಯವಿಶ್ವಾಸವೂ ಇಲ್ಲ. ಯಾವುದೇ ಜನಾಂಗ ನಿಮ್ಮ ವಿರುದ್ಧ ಹಗೆತನವನ್ನು ಹೊಂದಿದ್ದರೆ ನೀವು ನಿಮ್ಮ ನ್ಯಾಯಪಾಲನೆಯ ಮಟ್ಟವನ್ನು ತಗ್ಗಿಸಬಾರದು. ನೀವು ಮಾಡುವ ನ್ಯಾಯಪಾಲನೆ ಮತ್ತು ಒಳ್ಳೆಯ ಕೆಲಸಗಳ ಮಾದರಿಗಳು ಇಸ್ಲಾಮ್ ಧರ್ಮದ ಸುಂದರ ಉಪದೇಶಗಳಿಗೆ ಸಾಕ್ಷ್ಯಗಳಾಗಲಿ. ಇಸ್ಲಾಮಿನ ತತ್ವಗಳ ವಿರುದ್ಧ ಯಾರೂ ಬೆರಳೆತ್ತದಿರಲಿ.

ತಾವು ಮುಸ್ಲಿಮರೆಂದು ಹೇಳಿಕೊಳ್ಳುವವರು ತಮ್ಮನ್ನು ಪರಿಶೀಲಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಅವರು ಮಾಡುವ ಕೆಲಸಗಳು ಮುಸ್ಲಿಮೇತರರನ್ನು ಇಸ್ಲಾಮಿನ ಕಡೆಗೆ ಆಕರ್ಷಿಸುತ್ತಿವೆಯೋ? ಈ ಜನರು ದೌರ್ಜನ್ಯ ಮತ್ತು ಕೊಲೆ ಮಾಡುತ್ತಿರುವರಲ್ಲದೆ, ಮುಂದಿನ ಪೀಳಿಗೆಯನ್ನು ನಾಶ ಮಾಡುತ್ತಿದ್ದಾರೆ. ಅವರು ಇಸ್ಲಾಮಿನಿಂದ ದೂರ ಸರಿಸುತ್ತಾ ಇದ್ದಾರೆ. ಮುಸ್ಲಿಮರ ಮತಪಂಡಿತರೆಂದು ಹೇಳಿಕೊಳ್ಳುವವರು ಜಿಹಾದ್ ಮತ್ತು ಪಂಗಡಗಳ ಹೆಸರಿನಲ್ಲಿ ಈ ಭೀಕರರ ಗುಂಪುಗಳಿಗೆ ಜನ್ಮ ನೀಡಿದರು. ಈ ಮತಪಂಡಿತರು ತಮ್ಮ ಖಿಬ್ಲವನ್ನು ಸರಿಪಡಿಸಿ ತಮ್ಮ ಪೀಳಿಗೆಗಳಿಗೆ ನೈಜ ಇಸ್ಲಾಮ್ ಏನೆಂದು ಹೇಳಿಕೊಡುವವರಾಗಲಿ. ಭೀಕರರ ಗುಂಪುಗಳನ್ನು ನಾಶಮಾಡಲು ನೈಜ ಇಸ್ಲಾಮೀ ತತ್ವಗಳನ್ನು ಆಯುಧವಾಗಿ ಬಳಸಲಿ. ಆದರೆ ಇದು ಸಾಧ್ಯವಾಗುವುದು ಈ ಕಾಲಘಟ್ಟದ ಇಮಾಮರನ್ನು ನಂಬಿ ನೈಜ ಇಸ್ಲಾಮನ್ನು ಸ್ವತಃ ಅನುಸರಿಸಿ ಇತರರನ್ನೂ ಅನುಸರಿಸುವಂತೆ ಮಾಡುವಾಗ ಮಾತ್ರವಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿ, ಮೌಲವಿಗಳೊಂದಿಗೆ

ತಮ್ಮನ್ನು ಸುಧಾರಣೆ ಮಾಡಿಕೊಳ್ಳಲು ಉಪದೇಶಿಸುತ್ತಾ ಹೀಗೆ ಹೇಳಿದರು:

ಮೌಲವಿಗಳು ಒಟ್ಟುಗೂಡಿ ಮೃಗಸಮಾನರಾದ ಮುಸ್ಲಿಮರ ಹೃದಯಗಳಿಂದ ಭೀಕರವಾದ ಮತ್ತು ಜಿಹಾದ್ ಬಗ್ಗೆ ತಪ್ಪು ಕಲ್ಪನೆಗಳನ್ನು ತೆಗೆದು ಹೊರಗೆ ಸರಿಸಿದರೆ ಅವರು ಮುಸ್ಲಿಮ್ ಸಮುದಾಯಕ್ಕೆ ಬಹಳ ದೊಡ್ಡ ಉಪಕಾರ ಮಾಡುವವರಾಗುವರು. ಅಷ್ಟು ಮಾತ್ರವಲ್ಲ, ಅವರ ಮೂಲಕ ಇಸ್ಲಾಮ್ ಧರ್ಮದ ಒಳಿತುಗಳ ದೃಢಕಾಯ ಬೇರುಗಳು ಜನರಿಗೆ ಪ್ರಕಟವಾಗುವುವು ಮತ್ತು ಧಾರ್ಮಿಕ ವಿರೋಧಿಗಳು ಇಸ್ಲಾಮಿನ ಬಗ್ಗೆ ಹೊಂದಿರುವ ತಪ್ಪು ಗ್ರಹಿಕೆಗಳು ನಿವಾರಣೆಗೊಳ್ಳುತ್ತಾ ಹೋಗುವುವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಸ್ಲಾಮಿನ ಸುಂದರ ತತ್ವಗಳನ್ನು ಪ್ರಚಾರ ಮಾಡಲು ಇದ್ದ ಕಾಳಜಿ ಆ ರೀತಿ ಇತ್ತು. ಆದರೆ ಈ ಮೌಲವಿಗಳೆಂದು ಹೇಳಿ ಕೊಳ್ಳುವವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಕೇಳಲು ಯಾವಾಗ ಸಿದ್ಧರಾಗುವರು. ಅವರು ಈಗ ಉದ್ದೇಶಿಸುವುದು ಇಸ್ಲಾಮ್ ಧರ್ಮದ ಪಾವಿತ್ರ್ಯವನ್ನು ಕಾಪಾಡುವುದನ್ನಲ್ಲ. ಅವರು ಸ್ವಾರ್ಥ ಲಾಭವನ್ನು ಮತ್ತು ರಾಜಕೀಯ ಲಾಭವನ್ನು ಗಳಿಸಲು ಇಚ್ಛಿಸುತ್ತಾರೆ. ಅವರು ಅಲ್ಲಾಹನ ಈ ಆಜ್ಞೆಯನ್ನು ಯಾವಾಗಲೂ ನೆನಪಿಟ್ಟುಕೊಳ್ಳಬೇಕು. اتَّقُوا اللَّهَ **ಇತ್ತಖುಲ್ಲಾಹ್** 'ಅಲ್ಲಾಹನಿಗೆ ಭಯಪಡಿರಿ' ಎನ್ನುವುದೇ ಆ ಆಜ್ಞೆಯಾಗಿದೆ. ಅಲ್ಲಾಹನು ಮನುಷ್ಯನ ಪ್ರತಿಯೊಂದು ಕರ್ಮದ ಸಮಾಚಾರ ತಿಳಿದಿರುವುದು ಕೇವಲ ತಿಳಿದಿರಲಿಕ್ಕೆ ಮಾತ್ರವಲ್ಲ. ಮನುಷ್ಯನ ಪ್ರತಿಯೊಂದು ಕೆಲಸ ಅವನ ಅದೃಷ್ಟವನ್ನು ನಿರ್ಧರಿಸುತ್ತದೆ. ದೌರ್ಜನ್ಯ ಮಾಡುವವರು ಖಂಡಿತವಾಗಿಯೂ ತಮ್ಮ ಕೆಟ್ಟ ಅಂತಿಮಗತಿಯನ್ನು ತಲಪುವರು. ನೀವು ನಿಮ್ಮ ಇಹ ಪರಲೋಕಗಳ ಸ್ಥಿತಿಯನ್ನು ಸುಧಾರಿಸಲು ಬಯಸುವಿರಾದರೆ ಅಲ್ಲಾಹನ ಆಜ್ಞೆಗಳನ್ನು ನಿಮ್ಮ ಮುಂದೆ ಇರಿಸಿರಿ. ಶತ್ರುಗಳೊಂದಿಗೆ ಕೂಡ ನ್ಯಾಯಪೂರ್ಣವಾಗಿ ವರ್ತಿಸಿರಿ. **ಕಲಿಮ** ಉಚ್ಚರಿಸುವ ಮುಸ್ಲಿಮರ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ: رُحَمَاءُ بَيْنَهُمْ **ರುಹಮಾಉ ಬೈನಹುಮ್** ಅವರು ಪರಸ್ಪರ ದಯಾಭಾವದಿಂದ ವರ್ತಿಸುವವರಾಗಿದ್ದಾರೆ. ಆದರೆ ಈ ಕಾಲದ ಮುಸ್ಲಿಮರು ತಮ್ಮವರೊಂದಿಗೆ ಸಹ ಶತ್ರುಗಳಿಗಿಂತ ಕೆಟ್ಟದಾಗಿ ವರ್ತಿಸುತ್ತಾರೆ. ಇದರ ದೃಶ್ಯಗಳನ್ನು ನಾವು ನೋಡುತ್ತಾ ಇದ್ದೇವೆ.

ಏನು ಈ ಜನರು ಹೀಗೆ ಭಾವಿಸುತ್ತಿದ್ದಾರೋ – ಇವರು ಮಾಡುವ ದೌರ್ಜನ್ಯಗಳಿಗೆ ಪ್ರತಿಯಾಗಿ ಹಿಡಿಗೂಡಲ್ಪಡದೆ ಮುಂದುವರಿಯುವರು ಎಂದು. ಹಾಗೆ ಎಂದೂ ಆಗಲಾರದು. ಅಲ್ಲಾಹನು ಹೀಗೆ ಹೇಳಿದ್ದಾನೆ:

وَمَنْ يَقْتُلْ مُؤْمِنًا مُتَعَمِّدًا فَجَزَاؤُهُ جَهَنَّمُ خَالِدًا فِيهَا وَغَضِبَ اللَّهُ عَلَيْهِ وَلَعَنَهُ وَأَعَدَّ لَهُ عَذَابًا عَظِيمًا

**ವ ಮನ್ ಯಖ್ತುಲ್ ಮೂಮಿನನ್ ಮುತಅಮ್ಮಿದನ್ ಫಜಝಾಉಹೂ ಜಹನ್ನಮು ಖಾಲಿದನ್ ಫೀಹಾ ವ ಗಝಿಬಲ್ಲಾಹು ಅಲೈಹಿ ವ ಲಅನಹೂ ವ ಅಅದ್ದಲಹೂ ಅದ್‌ಾಬನ್ ಅಝೀಮ.**

"ಯಾವನಾದರೂ ಉದ್ದೇಶಪೂರ್ವಕವಾಗಿ ಒಬ್ಬ ವಿಶ್ವಾಸಿಯನ್ನು ಕೊಂದರೆ, ಅವನಿಗೆ ಅದರ ಶಿಕ್ಷೆ ನರಕವಾಗಿದೆ. ಅಲ್ಲಿ ಅವನು ದೀರ್ಘಕಾಲ ವಾಸಿಸುವನು. ಅಲ್ಲಾಹನು ಅವನ ಮೇಲೆ ಕೋಪಗೊಳ್ಳುವನು ಮತ್ತು ಅವನನ್ನು ಶಪಿಸುವನು ಹಾಗೂ ಒಂದು ಕಠಿಣವಾದ ಶಿಕ್ಷೆಯನ್ನು ಅವನಿಗಾಗಿ ಸಿದ್ಧಗೊಳಿಸಿಟ್ಟಿರುವನು."(ಪವಿತ್ರ ಖುರ್‌ಆನ್ 4: 94)

ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: وَلَا تَقُولُوا لِمَنْ أَلْقَى إِلَيْكُمُ السَّلَامَ لَسْتَ مُؤْمِنًا **ವಲಾ ತಖೂಲೂ ಲಿಮನ್ ಅಲ್‌ಖಾ ಇಲೈಕುಮುಸ್ಸಲಾಮ ಲಸ್‌ತ ಮೂಮಿನ.** "ನಿನಗೆ ಸಲಾಮ್ ಹೇಳಿದವನೊಂದಿಗೆ "ನೀನು ಸತ್ಯವಿಶ್ವಾಸಿಯಲ್ಲ" ಎಂದು ಹೇಳಬೇಡ."

ಈ ರೀತಿ ಸಾಹೋದರ್ಯದ ಒಂದು ಪಾವಿತ್ರ್ಯವನ್ನು ಇಸ್ಲಾಮ್ ಸ್ಥಾಪಿಸಿತು. ಯಾರಾದರೂ ಈ ಪಾವಿತ್ರ್ಯವನ್ನು ಕೆಡಿಸುವುದಾದರೆ ಮತ್ತು ಕಲಿಮ ಉಚ್ಚರಿಸುವ ಸತ್ಯವಿಶ್ವಾಸಿಯನ್ನು ಕೊಲ್ಲುವುದಾದರೆ, ಅಂತಹವನಿಗೆ ನರಕವೇ ವಾಸ ಸ್ಥಳವಾಗಿದೆ. ಅವನು ಅಲ್ಲಾಹನ ಶಾಪಕ್ಕೆ ಗುರಿಯಾಗುವನು.

ಆತ್ಮಹತ್ಯಾತ್ಮಕ ಆಕ್ರಮಣ ಮಾಡಿ ಮತ್ತು ಎದುರಿಸಿ ಕೊಲ್ಲಲ್ಪಡುವವರು, ಮೌಲವಿಗಳು ಅವರಿಗೆ ನೀಡಿದ ತಪ್ಪು ಉಪದೇಶಗಳ ಪ್ರಕಾರ ತಾವು ಅಲ್ಲಾಹನ ಪ್ರೀತಿಗೆ ಪಾತ್ರರಾದೆವು ಎಂದು ಗ್ರಹಿಸುತ್ತಾರೆ. ಆದರೆ ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ– ನೀವು ಸತ್ಯವಿಶ್ವಾಸಿಯನ್ನು ಹತ್ಯೆಮಾಡಿ ನೀವು ಅಲ್ಲಾಹನ ಸಂಪ್ರೀತಿಯನ್ನಲ್ಲ ಅವನ ಶಾಪಕ್ಕೆ ಈಡಾಗುವಿರಿ. ನರಕ ನಿಮ್ಮ ಶಾಶ್ವತ ವಾಸಸ್ಥಾನವಾಗುವುದು.

ಆದರೆ ಈ ಜನರು ನರಕದ ಬಗ್ಗೆ ಅದೊಂದು ಕಥೆ ಎಂದು ಭಾವಿಸಿರಬಹುದು. ಅಥವಾ ಅವರಿಗೆ ಅಲ್ಲಾಹನು ಹೇಳಿದ ಮಾತುಗಳ ಬಗ್ಗೆ ನಂಬಿಕೆ ಇಲ್ಲ. ಅಲ್ಲಾಹನು ಹೀಗೆಲ್ಲಾ ಎಚ್ಚರಿಕೆ ನೀಡಿದ್ದರೂ ಈ ಜನರ ಮೇಲೆ ಯಾವ ಪ್ರಭಾವವೂ ಇಲ್ಲ. ಅವರು ಒಬ್ಬರಿನ್ನೊಬ್ಬರ ಕತ್ತು ಕಡಿಯುವುದರಲ್ಲಿ ಮಗ್ನರಾಗಿದ್ದಾರೆ. ಅವರಿಗೆ ಪರಲೋಕದ ಬಗ್ಗೆ ದೃಢನಂಬಿಕೆ ಇಲ್ಲವಾದರೂ ಅಲ್ಲಾಹನು ಇಹಲೋಕದಲ್ಲಿ ಅವರ ಸ್ಥಿತಿ ಹೇಗಾಗುವುದು ಎನ್ನುವುದರ ಬಗ್ಗೆ ಸಹ ಹೇಳಿದ್ದಾನೆ.

ನೀವು ಸಹೋದರ ಸಂಬಂಧದ ಪಾವಿತ್ರ್ಯವನ್ನು ಕೆಡಿಸಿದರೆ ಇಹಲೋಕದಲ್ಲಿ ಸಹ ನಿಮ್ಮ ಗೌರವಕ್ಕೆ ಚ್ಯುತಿಯಾಗುವುದೆಂದು ಅಲ್ಲಾಹನು ಹೇಳಿದ್ದಾನೆ. ನೀವು ಯಾವ ಲೌಕಿಕ ಲಾಭಕ್ಕೋಸ್ಕರ ಇವುಗಳನ್ನೆಲ್ಲಾ ಮಾಡುತ್ತಿರುವಿರೋ ಅದು ಸಹ ನಿಮಗೆ ದೊರಕಲಾರದೆಂದು ಅಲ್ಲಾಹನು ಹೇಳಿದ್ದಾನೆ.

ಅಲ್ಲಾಹನು ಹೀಗೆ ಹೇಳಿದ್ದಾನೆ:

وَأَطِيعُوا اللَّهَ وَرَسُولَهُ وَلَا تَنَازَعُوا فَتَفْشَلُوا وَتَذْهَبَ رِيحُكُمْ وَاصْبِرُوا إِنَّ اللَّهَ مَعَ الصَّابِرِينَ **ವ ಅತೀಉಲ್ಲಾಹ ವ ರಸೂಲಹೂ ವಲಾ ತನಾಝುಊ ಫ ತಫ್‌ಶಲೂ ವ ತದ್‌ಹಬ ರೀಹುಕುಮ್ ವಸ್‌ಬಿರೂ ಇನ್ನಲ್ಲಾಹ ಮಅಸ್ಸಾಬಿರೀನ್.** "ನೀವು ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕನನ್ನು ಅನುಸರಿಸಿರಿ. ಅನ್ಯೋನ್ಯ ಜಗಳಾಡಬೇಡಿರಿ. ಇಲ್ಲವಾದರೆ ನೀವು ಧೈರ್ಯಗುಂದುವಿರಿ ಹಾಗೂ ನಿಮ್ಮ ಶಕ್ತಿ ಕ್ಷಯಿಸುವುದು. ನೀವು ಸ್ಥಿರಚಿತ್ತರಾಗಿರಿ. ಸ್ಥಿರಚಿತ್ತರಾಗುವವರೊಂದಿಗೆ ಅಲ್ಲಾಹನಿದ್ದಾನೆ." (ಪವಿತ್ರ ಖುರ್‌ಆನ್ 8: 47)

ಇಂದಿನ ಮುಸ್ಲಿಮರ ಸ್ಥಿತಿಯನ್ನು ನೋಡಿದರೆ ಅಲ್ಲಾಹನ ಈ ಮಾತು ಶೇಕಡ ನೂರರಷ್ಟು ಈಡೇರಿದುದಾಗಿ ಕಾಣಿಸುತ್ತದೆ. ಮುಸ್ಲಿಮರ ಶಕ್ತಿ ಕೊನೆಗೊಂಡಿದೆ. ಅಸಂಖ್ಯಾತ ಭೀಕರವಾದಿ ಗುಂಪುಗಳ ಕಾರಣದಿಂದ ಬಹುತೇಕ ಮುಸ್ಲಿಮ್ ದೇಶಗಳು ಯುದ್ಧ ಕ್ಷೇತ್ರಗಳಾಗಿವೆ. ಪಶ್ಚಿಮದ ಶಕ್ತಿಗಳ ಎದುರಿಗೆ ಈ ಜನರು ಬೇಡುವ ಕೈ ಎತ್ತಿಕೊಂಡಿದ್ದಾರೆ. ಅಲ್ಲಾಹನ ಕಡೆಗೆ ಶ್ರದ್ಧೆ ನೀಡುವುದು ಕೊನೆಗೊಂಡಿದೆ. ಅವರು ಅವನನ್ನು ಬಿಟ್ಟಿರುವರು. ಅಲ್ಲಾಹನನ್ನು ಬಿಟ್ಟು ಲೌಕಿಕ ಜನರ ಕಡೆಗೆ ಬಾಗಿಕೊಂಡಿರುತ್ತಾರೆ ಮತ್ತು ಅವರನ್ನೇ ತಮ್ಮ ಬಾಳ್ವಿಕೆಗೆ ಮಾರ್ಗವೆಂದು ಗಣಿಸಿದ್ದಾರೆ.

ಮುಸ್ಲಿಮರದೆಂದು ಹೇಳುವ ದೇಶಗಳನ್ನು ನಾಶದ ಕಡೆಗೆ ಒಯ್ಯುತ್ತಿರುವ ಯಾವ್ಯಾವ ವಿಷಯಗಳನ್ನು ವಿವರಿಸಲು ಸಾಧ್ಯ! ಒಂದು ದೌರ್ಜನ್ಯ ನಡೆಯುವಾಗ ಕೆಲವು ದಿನಗಳ ತನಕ ಅದರ ಪ್ರಭಾವ ಜನರ ಮೇಲಿರುತ್ತದೆ. ಅವರು ಪ್ರತಿರೋಧದ ಬೊಬ್ಬೆ ಹಾಕುತ್ತಾರೆ. ಅನಂತರ ಇದೇ ದೌರ್ಜನ್ಯಕಾರರ ಉಪಕರಣಗಳಾಗಿ ಜನರು ಬಳಸಲ್ಪಡುತ್ತಾರೆ.

ಅಲ್ಲಾಹನ ಮಾತುಗಳನ್ನು ಎಂದಿನ ತನಕ ಅಂಗೀಕರಿಸುವುದಿಲ್ಲವೋ ಶತ್ರುಗಳೊಂದಿಗೆ ಕೂಡ ನ್ಯಾಯವನ್ನು ಪಾಲಿಸುವ ಮಟ್ಟವನ್ನು ಕಾಪಾಡುವುದಿಲ್ಲವೋ, **ಸಲಾಮ್** ಹೇಳುವವನಿಗೆ ಶಾಂತಿ ಕೋರುವುದಿಲ್ಲವೋ, ಸಹೋದರ ಸಂಬಂಧದ ಮಟ್ಟಗಳನ್ನು ಸ್ಥಾಪಿಸುವುದಿಲ್ಲವೋ, ಸರಕಾರ ತನ್ನ ಪ್ರಜೆಗಳ ಬಗ್ಗೆ ಕಾಳಜಿ ವಹಿಸುವುದಿಲ್ಲವೋ, ಪ್ರಜೆಗಳು ತಮ್ಮ ಸರಕಾರದ ಆಜ್ಞಾನುವರ್ತಿಗಳಾಗುವುದಿಲ್ಲವೋ, ಅಲ್ಲಾಹನ ಭಯ ಹೃದಯದಲ್ಲಿ ಉಂಟಾಗುವುದಿಲ್ಲವೋ, ಅಂದಿನ ತನಕ ಇಂತಹ ದೌರ್ಜನ್ಯಕಾರಕ ಘಟನೆಗಳು ನಡೆಯುತ್ತಾ ಇರುವುವು. ಈ ವಿಷಯ ನಮ್ಮ ನಾಯಕರಿಗೂ ನಮ್ಮ ಮತಪಂಡಿತರೆಂದು ಹೇಳಿಕೊಳ್ಳುವವರಿಗೂ ಜನ ಸಾಮಾನ್ಯರಿಗೂ ಅರ್ಥವಾಗುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ಮುಸ್ಲಿಮ್ ಸಮುದಾಯದ ಕಷ್ಟ ನಮ್ಮನ್ನು ಸಹ ಕಷ್ಟಕ್ಕೊಳಪಡಿಸುತ್ತದೆ. ಈ ಕಾಲಘಟ್ಟದ ಇಮಾಮರು ತನ್ನ ಯಜಮಾನರೊಂದಿಗೆ ಸಂಬಂಧ ಹೊಂದಿದವರೆಂದು ಹೇಳುವ ಮುಸ್ಲಿಮರೊಂದಿಗೆ ಸಹಾನುಭೂತಿ ಮತ್ತು ಪ್ರೀತಿಯ ಸಂಬಂಧ ಹೊಂದಲು ನಮಗೆ ಕಲಿಸಿದ್ದಾರೆ. ಅವರು ಒಂದು ಫಾರಸೀ ಪದ್ಯದಲ್ಲಿ ಹೀಗೆ ಹೇಳಿದ್ದಾರೆ: **"ಓ ನನ್ನ ಹೃದಯವೇ ನೀನು ಈ ಜನರ ಬಗ್ಗೆ ಲಕ್ಷ್ಯ ನೀಡು. ಅವರ ಮೇಲೆ ಅನುಕಂಪ ತೋರಿಸು. ಏಕೆಂದರೆ, ಅವರು ಹಝ್ರತ್ ಪೈಗಂಬರರನ್ನು ಪ್ರೀತಿಸುವುದಾಗಿ ಹೇಳುತ್ತಾರೆ."**

ನಮ್ಮೊಂದಿಗೆ ದೌರ್ಜನ್ಯದಿಂದ ಈ ಜನರು ವರ್ತಿಸುತ್ತಾ ಇದ್ದರೂ ನಮಗೆ ಅವರ ಸ್ಥಿತಿಯ ಬಗ್ಗೆ ದುಃಖವಿದೆ. ನಾವು ಅವರಿಗೋಸ್ಕರ ಪ್ರಾರ್ಥಿಸುತ್ತೇವೆ. ನಾವು ಪ್ರತೀಕಾರ ಮಾಡುವುದಿಲ್ಲ. ಸಹಾನುಭೂತಿ ಮತ್ತು ಹಿತೈಷಿ ಭಾವನೆ ನಮ್ಮೊಳಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಉಂಟುಮಾಡಿದ್ದಾರೆ. ಇಸ್ಲಾಮ್ ಧರ್ಮದ ಉಪದೇಶಗಳ ಪ್ರಕಾರ ನಾವು ನಮ್ಮವರನ್ನೂ ಅನ್ಯರನ್ನೂ ಸಹಾನುಭೂತಿಯಿಂದ ಆವರಿಸಬೇಕೆಂದು ಉಪದೇಶಿಸಿದ್ದಾರೆ.

ಅವರು ಹೀಗೆ ಹೇಳಿದ್ದಾರೆ: "ಎಲ್ಲಾ ಪ್ರವಾದಿಗಳ ಆಗಮನದ ಸಮಾನ ಉದ್ದೇಶ ಅಲ್ಲಾಹನೊಂದಿಗೆ ಸತ್ಯವಾದ ಪ್ರೀತಿ ಸ್ಥಾಪಿಸುವುದು. ಮಾನವರ ಹಕ್ಕುಗಳ ಬಗ್ಗೆ ಮತ್ತು ಅವರೊಂದಿಗೆ ಪ್ರೀತಿ ಹೊಂದುವ ಬಗ್ಗೆ ಒಂದು ವಿಶಿಷ್ಟ ಕಾಳಜಿ ಹೊಂದುವುದಾಗಿದೆ. ಇವು ಈಡೇರದಿದ್ದರೆ ಇತರ ಎಲ್ಲವೂ ಕೇವಲ ಆಚಾರಗಳಾಗುವುವು."

"ಅಲ್ಲಾಹನ ದಾಸರ ಮೇಲೆ ದಯೆದೋರಿರಿ. ಅವರ ವಿರುದ್ಧ ನಾಲಗೆ, ಕೈ ಅಥವಾ ಬೇರೆ ರೀತಿಗಳಲ್ಲಿ ದೌರ್ಜನ್ಯ ಮಾಡಬೇಡಿರಿ. ಸೃಷ್ಟಿಗಳ ಒಳಿತಿಗೋಸ್ಕರ ಪ್ರಯತ್ನಿಸುತ್ತಾ ಇರಿ. ನಿಮ್ಮ ಅಧೀನರಾಗಿರುವವರ ಮೇಲೆ ಕೂಡ ಅಹಂಕಾರ ತೋರಿಸಬೇಡಿರಿ. ನಿಮ್ಮನ್ನು ಬೈಯ್ಯುತ್ತಾ ಇದ್ದರೂ ನೀವು ಯಾರಿಗೂ ಬೈಯ್ಯಬೇಡಿರಿ. ನಿರಾಡಂಬರರಾಗಿರಿ, ಸಹಿಷ್ಣುಗಳಾಗಿರಿ, ಒಳ್ಳೆಯ ಸಂಕಲ್ಪ ಹೊಂದಿದವರಾಗಿರಿ, ಸೃಷ್ಟಿಗಳಿಗೆ ಸಹಾನುಭೂತಿ ತೋರುವವರಾಗಿರಿ, ಆಗ ನೀವು ಅಲ್ಲಾಹನಿಂದ ಅಂಗೀಕರಿಸಲ್ಪಡುವಿರಿ."

"ಅಲ್ಲಾಹನು ನಿಮ್ಮಿಂದ ಬಯಸುವುದೇನೆಂದರೆ, ನೀವು ಎಲ್ಲ ಮಾನವರೊಂದಿಗೆ ನೀತಿ ಪೂರ್ವಕವಾಗಿ ವರ್ತಿಸಿರಿ. ನಿಮಗೆ ಉಪಕಾರ ಮಾಡದವನಿಗೂ ಉಪಕಾರ ಮಾಡಿರಿ. ನೀವು ದೇವನ ಸೃಷ್ಟಿಗಳೊಂದಿಗೆ ಹೇಗೆ ವರ್ತಿಸಬೇಕೆಂದರೆ, ನೀವು ಅವರ ವಾಸ್ತವಿಕ ಸಂಬಂಧಿಕರೋ ಎಂಬಂತೆ– ತಾಯಂದಿರು ತಮ್ಮ ಮಕ್ಕಳೊಂದಿಗೆ ವರ್ತಿಸುವ ಹಾಗೆ."

"ಒಳಿತಿನ ಅತ್ಯಂತ ಉನ್ನತ ಮಟ್ಟ ಸಹಜ ಉತ್ಸಾಹವಾಗಿದೆ. ಅದು ತಾಯಿಯ ಭಾವನೆ ಹಾಗಿರುತ್ತದೆ. ಒಬ್ಬ ಅಹ್ಮದಿ ಇಂತಹ ಭಾವನೆಗಳನ್ನು ಹೊಂದಬೇಕು."

ಪಾಕಿಸ್ಥಾನದಲ್ಲಿ ಘಟಿಸಿದ ದೌರ್ಜನ್ಯ ನಮಗೆ ಅತ್ಯಂತ ಹೆಚ್ಚು ನೋವನ್ನುಂಟುಮಾಡಿದೆ. ಮುಸ್ಲಿಮ್ ಲೋಕದಲ್ಲಿ ದೌರ್ಜನ್ಯವನ್ನು ಯಾರು ಮಾಡಿದರೂ ನಮಗೆ ನೋವುಂಟಾಗುತ್ತದೆ. ನಾವು ಲೋಕವನ್ನು ಕರೆಯುತ್ತಾ ಹೇಳುತ್ತಿದ್ದೇವೆ– ಅಲ್ಲಾಹನು ದೌರ್ಜನ್ಯಗಳನ್ನು ಕೊನೆಗೊಳಿಸಲು ತನ್ನ ವಾಗ್ದಾನ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದ್ದಾನೆ.

ಅವರು ಯುದ್ಧವನ್ನೂ ಕಠೋರ ಕೃತ್ಯಗಳನ್ನೂ ಕೊನೆಗೊಳಿಸಿ, ಪ್ರೀತಿ ವಾತ್ಸಲ್ಯಗಳನ್ನು ಹರಡುವವರೆಂದು ನಾವು ಹೇಳುವವರಾದ ಕಾರಣ ನಮ್ಮ ನೋವು ಬಹಳ ವರ್ಧಿಸುತ್ತಾ ಇದೆ.

"ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಆಲಿಸಿದರೆ ಲೋಕದಲ್ಲಿ ನೈಜ ಇಸ್ಲಾಮನ್ನು ಜಾರಿಗೊಳಿಸಬಲ್ಲಿರಿ" ಎಂದು ನಾವು ಹೇಳುತ್ತೇವೆ. ಆದರೆ ಮತಪಂಡಿತರೆಂದು ಹೇಳಿಕೊಳ್ಳುವವರು ನಮ್ಮನ್ನು ಹೆಚ್ಚು ವಿರೋಧಿಸುವವರಾಗಿ ಮುಂದುವರಿಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಮಾಜದಲ್ಲಿ ನ್ಯಾಯಪಾಲನೆ ಮತ್ತು ಸಹಾನುಭೂತಿ ಇಲ್ಲವಾಗುತ್ತದೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಗಲಭೆ ಗೊಂದಲಗಳು ಪ್ರಾರಂಭವಾಗುತ್ತವೆ. ನಿರಪರಾಧಿಗಳು ಕೊಲ್ಲಲ್ಪಡುತ್ತಾರೆ. ಹೀಗೆಯೇ ಸಂಭವಿಸುತ್ತದೆ. ಮುಸ್ಲಿಮರ ಮತಪಂಡಿತರೆಂದು ಹೇಳಿ ಕೊಳ್ಳುವವರು ಮುಸ್ಲಿಮ್ ಸಮುದಾಯವನ್ನು ಪಂಗಡಗಳಾಗಿ ವಿಂಗಡಿಸಿ, ವಿರೋಧ ಸೃಷ್ಟಿಸಿ ನಾಶ ಪಡಿಸುವುದಕ್ಕೆ ಬದಲಾಗಿ ಇಸ್ಲಾಮಿನ ಶಾಂತಿ ಸಂದೇಶ ಮುಸ್ಲಿಮರಲ್ಲಿ ಜಾರಿಗೊಳಿಸಿದ್ದರೆ ಎಷ್ಟು ಚೆನ್ನಾಗಿತ್ತು! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ, ಇಸ್ಲಾಮಿನ ಬಗ್ಗೆ ಅದು ಭೀಕರತೆಯನ್ನು ಪ್ರೋತ್ಸಾಹಿಸುವ ಖಡ್ಗದ ಧರ್ಮವೆಂಬ ತಪ್ಪು ಭಾವನೆ ಮುಸ್ಲಿಮೇತರರಿಂದ ದೂರ ಸರಿಸಲು ಪ್ರಯತ್ನಿಸಿರಿ. ಅಲ್ಲಾಹನು ಅವರಿಗೆ ಬುದ್ಧಿಯನ್ನು ನೀಡಲಿ. ಅಲ್ಲಾಹನು ಮುಸ್ಲಿಮ್ ದೇಶಗಳಲ್ಲಿ ಶಾಂತಿ ಸ್ಥಾಪಿಸಲಿ. ಸರಕಾರಗಳು ಮತ್ತು ಜನರು ನೈಜ ಇಸ್ಲಾಮ್ ತತ್ವಗಳನ್ನು ಗುರುತಿಸುವವರಾಗಲಿ. ನಾವು ಸಹ ಇಸ್ಲಾಮಿನ ಉನ್ನತ ಮಾದರಿ ತೋರಿಸಿ ಕೊಡುವ ಭಾಗ್ಯ ಲಭಿಸುವವರಾಗಲಿ. ಸಿರಿಯಾ, ಇರಾಖ್ ಮತ್ತು ಲಿಬಿಯಾದ ಅಹ್ಮದಿಯರು ಆ ದೇಶದ ನಾಗರಿಕರಾದ ಕಾರಣ ಮತ್ತು ಅಹ್ಮದಿಯರಾದ ಕಾರಣ ಕಷ್ಟದಲ್ಲಿದ್ದಾರೆ. ಅಲ್ಲಾಹನು ಅವರ ಕಷ್ಟಗಳನ್ನು ನಿವಾರಿಸಲಿ. ಕೆಲವರು ಬಹಳ ಕಷ್ಟದಲ್ಲಿದ್ದಾರೆ. ಎರಡು ಗುಂಪುಗಳೂ ಅಹ್ಮದಿಯರ ಶತ್ರುಗಳಾಗಿದ್ದಾರೆ. ಅವರಿಗೆ ಇಂತಹ ಸ್ಥಿತಿಯಲ್ಲಿ ಸಹಾಯ ಸಹ ತಲಪಿಸಲು ಸಾಧ್ಯವಾಗುವುದಿಲ್ಲ. ಅಲ್ಲಾಹನೇ ಅವರ ಮೇಲೆ ಅನುಗ್ರಹ ಮತ್ತು ದಯೆದೋರಲಿ. ಬೇಗನೆ ಅವರ ಕಷ್ಟ ನಿವಾರಣೆ ಆಗಲಿ.

ಜುಮುಅ ನಮಾಝ್ ನಂತರ ಕೆಲವು ನಮಾಝೆ ಗಾಯಿಬ್ ಅನುಷ್ಠಿಸಲಾಯಿತು. ಮುಬಾರಕ್ ಅಹ್ಮದ್ ಬಾಜ್ವ ಸಾಹೇಬರನ್ನು ಶಹೀದ್ ಮಾಡಲಾಗಿತ್ತು. إِنَّا لِلّٰهِ وَإِنَّا إِلَيْهِ رَاجِعُونَ ಐದು ವರ್ಷಗಳ ಹಿಂದೆ ತಾಲಿಬಾನ್ ಭೀಕರರು ಅವರನ್ನು ಅಪಹರಿಸಿ ಒಂದು ಮಸ್‌ಜಿದ್‌ನ ತಳದ ಕೋಣೆಯಲ್ಲಿ ಬಂಧಿಸಿದ್ದರು. ಅವರನ್ನು ಕೊಂದು ಶರೀರವನ್ನು ತುಂಡರಿಸಿ ಹೊಂಡಕ್ಕೆ ಹಾಕಿದ್ದರು.

ಇನ್ನೊಂದು ಜನಾಝ ಆಮಿನ ಅವ್‌ಸಾಫ್‌ರ ಸಾಹೀಬರವರದು. 12-12-2014ರಂದು ಅವರು ಸಹಜವಾಗಿ ಕಬಾಬೀರ್‌ನಲ್ಲಿ ಮೃತರಾಗಿದ್ದರು. إِنَّا لِلّٰهِ وَإِنَّا إِلَيْهِ رَاجِعُونَ

ಮೂರನೆಯ ಜನಾಝ ಇಬ್ರಾಹೀಮ್ ಅಬ್ದುರ್ರಹ್ಮಾನ್ ಬುಖಾರಿ ಸಾಹೇಬ್‌ರವರದು. 13-12-2014ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು ಈಜಿಪ್ಟ್ ನಿವಾಸಿಯಾಗಿದ್ದರು. 63ನೇ ವಯಸ್ಸಿನಲ್ಲಿ ಮೃತರಾದರು.

ಅಲ್ಲಾಹನು ಇವರೆಲ್ಲರ ಆಧ್ಯಾತ್ಮಿಕ ಸ್ಥಾನವನ್ನು ಉನ್ನತಗೊಳಿಸಲಿ ಅವರೆಲ್ಲರಿಗೂ ಮಗ್‌ಫಿರತ್ ಮತ್ತು ರಹ್ಮತ್ ನೀಡಲಿ – ಆಮೀನ್.

---------------*****-------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 19-12-2014.*
Summarized by *Majlis Ansarullah Bharat*
***Kannada Translation:*** M. Ubeidullah for Kannada Desk, Qadian
***Reviewed by:*** Muhammad Yusuf | ***Typing:*** U Basheer Ahmad
*Published By:* **Kannada Isha'at Team** for **Nazarath Nashr-O-Isha'ath, Qadian**
***Email***: *khutuba.kannada@gmail.com*